ದಿನಾಂಕ 13-02-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ವಾದಿಯ ಪರ ಶ್ರೀ ಡಿ.ಎಸ್. ವಕೀಲರಿಂದ**

1) ನಿಶಾನೆ ಪಿ-1 ರ ದಾಖಲೆ ನನ್ನ ಮತ್ತು ಪ್ರತಿವಾದಿಯೊಂದಿಗೆ ಆದ ಕರಾರು. ನಾನು ನಿಶಾನೆ ಪಿ-1 ರ ಕೊನೆಯ ಭಾಗದಲ್ಲಿ ಹೇಳಿದಂತಹ ಪಾವತಿಯ ಶೆಡ್ಯೂಲ್ ನಂತೆ ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಕರಾರಿನಂತೆ ಕಾಮಗಾರಿಯ ವಿವಿಧ ಹಂತಗಳಲ್ಲಿಯ ಮುಂಗಡ ಹಣವನ್ನು ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ನಾನು ನಿಶಾನೆ ಡಿ-1 ರಂತೆ ಹಣ ಪಾವತಿಸಿದ್ದೇನೆ, ಅದಕ್ಕಾಗಿ ವಾದಿ ಹಿಂಬರಹ ನೀಡಿದ್ದಾರೆ. ನಿಶಾನೆ ಡಿ-1 ರ 3 ನೇ ಪುಟದಲ್ಲಿ ವಾದಿ ಸಹಿ ಮಾಡಿರುವ ಹಣಗಳಿಗಾಗಿ ಮಾತ್ರವೇ ನಾನು ಪಾವತಿ ಮಾಡಿದ್ದೇನೆ. ನಿ.ಡಿ-1 ರ 3 ನೇ ಪುಟದಲ್ಲಿ ವಾದಿ ಸಹಿ ಮಾಡಿದ್ದಾನೆ ಎನ್ನುವ ಹಣ ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-1 ರ 3 ನೇ ಪುಟದ 18-02-2021 ರ ನಾಲ್ಕು ಎಂಟ್ರಿಗಳಲ್ಲಿಯ ದಿನಾಂಕಗಳನ್ನು ಒಡೆದು ಹಾಕಿದ್ದೇನೆ ಎಂದರೆ, ಅದನ್ನು ನಾನು ಒಡೆದು ಹಾಕಿಲ್ಲ, ಯಾರು ಒಡೆದು ಹಾಕಿದ್ದಾರೆ ಎಂದು ಗೊತ್ತಿಲ್ಲ. ನಿಶಾನೆ ಡಿ-1 ರ ದಾಖಲೆ ಆದಾಗಿನಿಂದ ನನ್ನ ಬಳಿಯಲ್ಲಿಯೇ ಇತ್ತು ಎಂದರೆ, ಸಾಕ್ಷಿ ಸುಮ್ಮನಿದ್ದಾರೆ.

2) ನಿಶಾನೆ ಸಿ-1 ರ ವರದಿಗೆ ನಾನು ಮಾಡಿಸಿದ ಕೆಲಸ ಮೌಲ್ಯಮಾಪನ ಆಗಿಲ್ಲ ಎಂಬ ಕಾರಣಕ್ಕಾಗಿ ಆ ವರದಿ ಸರಿ ಇಲ್ಲ ಎಂದು ಹೇಳಿದ್ದೇನೆ ಎಂದರೆ, ವಾದಿ ಅದನ್ನು ಅರ್ಧಕ್ಕೆ ಬಿಟ್ಟು ಹೋಗಿದ್ದ. ನಾನು ಮಾಡಿಸಿದ ಕೆಲಸವನ್ನು ನಿಶಾನೆ ಸಿ-1 ರಲ್ಲಿ ಕಾಣಿಸಿಲ್ಲ ಎಂಬುದಕ್ಕಾಗಿ ಆಕ್ಷೇಪವೇ ಎಂದರೆ, ಹೌದು.

3) ನನ್ನ ಮತ್ತು ವಾದಿಯ ನಡುವೆ ನಿಪಿ-1 ರಂತೆ ಮನೆಯ ನೆಲಕ್ಕೆ ಗ್ರಾನೈಟ್ ಹಾಕುವ ಕರಾರು ಅಗಿರಲಿಲ್ಲ ಎಂದರೆ, ಅದು ಹೆಚ್ಚಿನ ಖರ್ಚು ಆಗುತ್ತದೆ ಎಂದು ವಾದಿ ಹೇಳಿದ್ದಾರೆ. ನಿಪಿ-1 ರ ಮನೆಯ ಹಾಕಿದ ಗ್ರಾನೈಟ್ ನ ದಾಖಲೆ ಮತ್ತು ಲೆಕ್ಕ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಮನೆಯಲ್ಲಿ ಎಲ್ಲಿ ಗ್ರಾನೈಟ್ ಹಾಕಿದೆ ಎಂದರೆ , ಆತ

ಬಿಟ್ಟು ಹೋದ ನಂತರ ನಾನು ಗ್ರಾನೈಟ್ ಹಾಕಿದ್ದೇನೆ.

4) ನಿಶಾನೆ ಡಿ-4, 8, 11, ರ ದಾಖಲೆಗಳನ್ನು ಯಾರು ಕೊಟ್ಟಿದ್ದಾರೆ ಎಂದರೆ, ಅದರಲ್ಲಿ ಅಂಗಡಿಯ ಹೆಸರು ಇಲ್ಲ. ಸದರಿ ದಾಖಲೆಗಳನ್ನು ದಾವೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾಖಲೆಗಳಲ್ಲಿ ತೋರಿಸಿದ ಹಣವನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-27 ರ ದಾಖಲೆಯನ್ನು ಸಹ ದಾವೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಇದರಲ್ಲಿ ಹೇಳಿದ ಹಣವನ್ನು ಸಹ ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-27 ರಲ್ಲಿ ಹೇಳಿದ ಹಣವನ್ನು ನಗದಾಗಿಯೇ ಪಾವತಿಸಿದ್ದೆ. ನಿಶಾನೆ ಡಿ-4, 8, 11, 27 ರ ವ್ಯವಹಾರಗಳಿಗಾಗಿ ನಾನು ತೆರಿಗೆ ಪಾವತಿಸಿಲ್ಲ ಎಂದರೆ ಸರಿಯಲ್ಲ.

5) ನನ್ನ ಮನೆಯ ಮುಖ್ಯದ್ವಾರದ ಬಾಗಿಲನ್ನು ಅಕೇಶಿಯಾ ಮರದಿಂದ ಮಾಡಿದ್ದು ಇದೆ. ನಿಪಿ-1 ರ ಕರಾರಿನಂತೆ ಮನೆಯ ಮುಖ್ಯದ್ವಾರದ ಬಾಗಿಲನ್ನು ಯಾವ ಮರದಿಂದ ಮಾಡಬೇಕು ಎಂದು ಕರಾರು ಆಗಿತ್ತು ಎಂದರೆ, ಅಕೇಶಿಯಾ ಮರದಿಂದ, ಅದಕ್ಕಾಗಿ ಎಷ್ಟು ಹಣಕ್ಕೆ ಒಪ್ಪಿತ್ತು ಎಂದರೆ, 85 ಸಾವಿರ ರೂಪಾಯಿಗಳಿಗೆ ಒಪ್ಪಿ ತ್ತು. ನಿಶಾನೆ ಡಿ-28 ರ ದಾಖಲೆಯಂತೆ ನಾನು ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ ಮತ್ತು ಅದು ನ್ಯಾಯಯುತವಾದ ಬಿಲ್ಲು ಅಲ್ಲ ಎಂದರೆ ಸರಿಯಲ್ಲ. ಸದರಿ ಬಿಲ್ಲಿನಂತ ನಾನು ಜಿ.ಎಸ್.ಟಿ ಪಾವತಿಸಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ-28 ರ ದಾಖಲೆಯನ್ನು ಸಹ, ನಿಶಾನೆ ಡಿ-4, 8, 11, 27 ರ ದಾಖಲೆಗಳಂತೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-1 ರ ಮನೆಯನ್ನು ಸಂಪೂರ್ಣಗೊಳಿಸಲು ನನಗೆ 45 ಲಕ್ಷಗಳವರೆಗೆ ಖರ್ಚು ಬಂದಿದೆ. ಆ ಖರ್ಚಿನಲ್ಲಿ ಬಳಸಿದ ಎಲೆಕ್ಟ್ರಿಕಲ್ಸ್ ಸಾಮಾಗ್ರಿಗಳು ಎಲ್ಲವೂ ಸೇರಿದೆ.

6) ವಾದಿ ಕೆಲಸ ಬಿಟ್ಟ ನಂತರ ಆ ಕೆಲಸವನ್ನು ನನ್ನ ಅಕ್ಕನ ಮಗ ಮನೋಜ್ ಎನ್ನುವವನು ನಿಂತು ಪೂರ್ಣಗೊಳಿಸಿದ್ದ. ಅದಕ್ಕಾಗಿ ನಾನು ಅವನಿಗೆ ಹಣ ಕೊಟ್ಟಿದ್ದೆ. ಮನೋಜ್ ಮಾಡಿಸಿದ ಕೆಲಸದ ಒಟ್ಟು ಖರ್ಚು ಸುಮಾರು 15 ಲಕ್ಷವಾಗಿದೆ, ಅದೆಲ್ಲವನ್ನು ಬರೆದಿಟ್ಟಿಲ್ಲ, ಇರುವಷ್ಟು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು

ಹೇಳುವಂತೆ ಮನೆಯ ಕಾಮಗಾರಿಗಾಗಿ ಸುಮಾರು 45 ಲಕ್ಷಗಳಷ್ಟು ಹಣವನ್ನು ನಾನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ ದಾವಾ ಎ-ಶೆಡ್ಯೂಲ್ ನಲ್ಲಿಯ ಕೆಲಸವನ್ನು ಮಾಡಿಕೊಟ್ಟಿದ್ದಾರೆ. ನಾನು ವಾದಿಗೆ ದಾವಾ ಬಿ-ಶೆಡ್ಯೂಲ್ ನಲ್ಲಿಯ ಹಣವನ್ನು ಪಾವತಿಸಿದ್ದೇನೆ ಎಂದರೆ , ನಾನು ಎಲ್ಲಾ ಹಣವನ್ನು ಪಾವತಿಸಿದ್ದೇನೆ. ದಾವಾ ಬಿ-ಶೆಡ್ಯೂಲ್ ನ ಹಣವನ್ನು ಬಿಟ್ಟು ನಾನು ಬೇರೆ ಹಣ ಪಾವತಿಸಿಲ್ಲ ಎಂದರೆ, ನನ್ನ ಕಟ್ಟಡದ ಬ್ಯಾಂಕ್ ಸಾಲದ ಹಣವನ್ನು ವಾದಿಗೆ ಪಾವತಿಸುವಾಗ ಸೆಲ್ಫ್ ಚೆಕ್ ಮೂಲಕ ಪಾವತಿಸಿದ್ದೇನೆ. ಬ್ಯಾಂಕ್ ಸಾಲವನ್ನು ನಾನು ಬ್ಯಾಂಕ್ ಆಫ್ ಬರೋಡಾದ ಕೊಳಲಗಿರಿ ಶಾಖೆಯಲ್ಲಿ ತೆಗೆದಿದ್ದೇನೆ. ಆ ಖಾತೆಯ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಈಗ ಆ ದಾಖಲೆ ಹಾಜರುಪಡಿಸಿಲ್ಲ. ನಿಪಿ-1 ರ ಕಾಮಗಾರಿಯ ಖರ್ಚನ್ನು ವರಮಾನ ತೆರಿಗೆಯ ಲೆಕ್ಕದಲ್ಲಿ ತೋರಿಸಿದ್ದೇನೆ.

7) ವಾದಿಗೆ ಸೆಲ್ಫ್ ಚೆಕ್ ಮೂಲಕ ಹಣ ಪಾವತಿಸಿದ ಬಗ್ಗೆ ದಾಖಲೆ ಇದೆ, ಅದನ್ನು ಹಾಜರುಪಡಿಸಬಲ್ಲೆ. ನಾನು ವಾದಿಗೆ ಸೆಲ್ಫ್ ಚೆಕ್ ಮೂಲಕ ಹಣ ಪಾವತಿಸಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಹೆಚ್ಚಿನ ಪಾಟೀಸವಾಲಿಗೆ ಸಮಯ ಕೇಳಿದ್ದರಿಂದ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್ ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ